(1991-92 ರಲ್ಲಿಮತ್ತು 1994-95ರಲ್ಲಿ) 1992ರಲ್ಲಿನ ಸಮೀಕ್ಷಾ ವರದಿಯಂತೆ ಸಂಗ್ರಹಣಾ ಸಾಮರ್ಥ್ಯದ ಶೇಕಡಾ 6.3ರಷ್ಟು ಹೂಳು ತುಂಬಿದೆ. ಹೂಳು ತೆಗೆಯಲು ಯಾವ ಕ್ರಮ ಕೈಗೊಂಡಿಲ್ಲ.

ವಿಷಯ : ಪಡಿತರ ವಿತರಣೆಯಲ್ಲಿರುವ ಅಸಮಾನತೆಯನ್ನು ಹೋಗಲಾಡಿಸುವುದು

1496 (2388)-ಶ್ರೀ ಪ್ರತಾಪ್ ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಪಡಿತರ ವಿತರಣೆಯಲ್ಲಿ ಅಸಮಾನತೆ ಹೌದು ಇದೆಯೇ? ಇದ್ದಲ್ಲಿ ಅದನ್ನು ಸರಿಪಡಿಸಲು ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು?

ಆ) ಜನಸಂಖ್ಯೆಯ ಆಧಾರದ ಮೇರೆಗೆ ಪಡಿತರ ವ್ಯವಸ್ಥೆ ಮಾಡಲಾಗಿದೆಯೇ?

ಇ) ಕಾರ್ಡುಗಳ ಸಂಖ್ಯೆಯಲ್ಲಿ ಪಡಿತರ ವ್ಯವಸ್ತೆ ಮಾಡಲಾಗಿದೆಯೇ?

ಜಿ. ಬಸವಣ್ಣೆಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಬಡತನ ರೇಖೆಗಿಂತ ಕೆಳಗಿನ ಕುಟುಂಬದವರಿಗೆ ಮತ್ತು ಬಡತನ ರೇಖೆಗಿಂತ ಮೇಲಿರುವ ಕುಟುಂಬಗಳಿಗೆ ಒದಗಿಸುವ ಆಹಾರ ಧಾನ್ಯಗಳ ಪ್ರಮಾಣದಲ್ಲಿ ವ್ಯತ್ಯಾಸವಿದೆ. ಹಾಲಿವಿತರಣ ಪ್ರಮಾಣ ಕೇಳಗಿನಂತಿದೆ.

ಬಡತನ ರೇಖೆಗಿಂತ ಕೆಳಗಿನ ಹಸಿರು ಕಾರ್ಡುದಾರರಿಗೆ	**ತಿಂಗಳೊಂದಕ್ಕೆ ಪ್ರತಿ ಪಡಿತರ ಚೀಟಿಗೆ 8 ಕೆ.ಜಿ. ಅಕ್ಕಿ 2 ಕೆ. ಜಿ. ಗೋಧಿಯಂತೆ.**
ಕೇಸರಿ : ಫೋಟೋ	ಪ್ರತಿ ಪಡಿತರ ಚೀಟಿಗೆ ಮಾಹೆ
ಪಡಿತರ ಚೀಟಿ	ಯಾನ 2 1/2 ಕೆ.ಜಿ. ಯಂತೆ
ಹೊಂದಿರುವ ಇತರೆ	ಆಹಾರ ಧಾನ್ಯ.
ಕುಟುಂಬಗಳಿಗೆ	(ಅಕ್ಕಿ ಅಥವಾ ಗೋಧಿ)

ಸಕ್ಕರೆ ಹಾಗೂ ಸೀಮೆಎಣ್ಣೆ ವಿತರಣೆ ಪ್ರಮಾಣ

	ಗ್ರಾಮೀಣ ಪ್ರದೇಶ	ಪಟ್ಟಣ ಪ್ರದೇಶ	ಅಪ ಪ್ರದೇಶ
ಸಕ್ಕರೆ	$1^1/_2$ - 2 ಕೆ.ಜಿ.	3 ಕೆ.ಜಿ.	3 ಕೆ.ಜಿ.
ಸೀಮೆಎಣ್ಣೆ	3 $^1/_2$ ಯಿಂದ 5 ಲೀಟರ್	6 ರಿಂದ 8 ಲೀಟರ್	8 ರಿಂದ 11 ಲೀಟರ್

ಆ) ಇಲ್ಲ.

ಇ) ಹೌದು, ಪಡಿತರ ಪದ್ಧತಿಯನ್ನು ಪ್ರಾರಂಭದಲ್ಲಿ ನಗರ ಪ್ರದೇಶಗಳಲ್ಲಿ ಜಾರಿಗೆ ತಂದಿದ್ದು ಅದನ್ನು ಗ್ರಾಮಾಂತರ ಪ್ರದೇಶಗಳಿಗೆ ತದನಂತರ ವಿಸರ್ಜಿಸಲಾಗಿದೆ. ನಗರ ಪ್ರದೇಶದಲ್ಲಿ ಕೊಡಲಾಗುತ್ತಿದ್ದ ಸಕ್ಕರೆ ಮತ್ತು ಸೀಮೆಎಣ್ಣೆ ಪ್ರಮಾಣವನ್ನು ಕಡಿಮೆ ಮಾಡಿ ಗ್ರಾಮಾಂತರ ಪ್ರದೇಶಗಳಿಗೆ ವರ್ಗಾಂತರಿಸಲಾಯಿತು. ಆದರೂ ಸಹ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ವಿತರಿಸಲಾಗುವ ಪ್ರಮಾಣದಲ್ಲಿ ವ್ಯತ್ಯಾಸವಿದೆ. ಈ ಅಂತರವನ್ನು ಕಡಿಮೆ ಮಾಡಲು ಪ್ರಯತ್ನ ಮಾಡಲಾಗುತ್ತಿದೆ.

ವಿಷಯ : ಬೆಂಗಳೂರು ನಗರಪಾಲಿಕೆಯ ಟಾಸ್ಕ್ ಫೋರ್ಸ್‌ನವರು ಕೆಡವಿರುವ ಅನಧಿಕೃತ ಕಟ್ಟಡಗಳು

1477 (2082)-ಶ್ರೀ ಎನ್. ರಾಜಣ್ಣ (ಭಾರತೀನಗರ) : ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಜನವರಿ 1997ರಿಂದ ಜೂನ್ 1997ರವರೆಗೆ ಬೆಂಗಳೂರು ಮಹಾನಗರ ಪಾಲಿಕೆ ಟಾಸ್ಕ್ ಫೋರ್ಸ್ ಅವರು ಎಷ್ಟು ಅನಧಿಕೃತ ನಿರ್ಮಾಣಗಳನ್ನು ಕೆಡವಿ ಹಾಕಿರುತ್ತಾರೆ.

ಆ) ಇದರಲ್ಲಿ, ಭಾರತೀನಗರ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಅನಧಿಕೃತ ನಿರ್ಮಾಣಗಳನ್ನು ಕೆಡವಿ ಹಾಕಲಾಗಿದೆ?

ಇ) ಈ ಅನಧಿಕೃತ ನಿರ್ಮಾಣಗಳಿಗೆ ಕಾರಣಕರ್ತರು ಯಾರು?

ಈ) ಭಾರತೀನಗರ ವಿಧಾನಸಭಾ ಕ್ಷೇತ್ರದಲ್ಲಿನ ಬಡಜನರು ಈ ರೀತಿಯ ಕಟ್ಟಡಗಳ ಕೆಡವಿಕೆಯಿಂದ ಹೊರಹಾಕಲ್ಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ಸರ್ಕಾರವು ಅವರಿಗೆ ಬದಲಿ ನಿವೇಶನ ಅಥವಾ ಮನೆಯನ್ನು ನೀಡುವುದೇ?